ಕರ್ನಾಟಕ ಸರ್ಕಾರ

**ಕಾನೂನು ಮಾಪನಶಾಸ್ತ್ರ ಇಲಾಖೆ**

ಸಂಖ್ಯೆ/ಕಾಮಾಇ/**ಸನಿತಾ/ಸಿಆರ್-132/2019-20**

ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಛೇರಿ
ನಂ.1, ಅಲಿ ಆಸ್ಕರ ರಸ್ತೆ, ಪಿ.ಬಿ.ನಂ.175
ಬೆಂಗಳೂರು-560 052, ದಿ:25-2-2020

**ಸುತ್ತೋಲೆ**

ವಿಷಯ:- ತಯಾರಕರು, ಮಾರಾಟಗಾರರು ಮತ್ತು ದುರಸ್ತಿದಾರರುಗಳು ತ್ರೈಮಾಸಿಕ ಲೆಕ್ಕದ ವಿವರಗಳನ್ನು ಸಲ್ಲಿಸುವ ಬಗ್ಗೆ.

ಕಾನೂನು ಮಾಪನಶಾಸ್ತ್ರ ಇಲಾಖೆಯಿಂದ ದಿ ಕರ್ನಾಟಕ ಲೀಗಲ್ ಮೆಟ್ರಾಲಜಿ (ಅಮಲುಜಾರಿ) ನಿಯಮ 2011ರ ನಿಯಮ 3ರಂತೆ ತಯಾರಿಕಾ, ಮಾರಾಟ ಮತ್ತು ದುರಸ್ತಿ ಅನುಜ್ಞಾಪತ್ರಗಳನ್ನು ನೀಡಲಾಗುತ್ತಿದೆ. ಮತ್ತು ಅದೇ ನಿಯಮದಡಿ ನಿಯಮ 3(12)ರಲ್ಲಿ "every manufacturer or repairer or dealer in weight or measure licensed under the Act and Rules shall maintain records and registers in the form set out in Schedule VII and also submit such periodical report/returns as may be specified by the Controller or such other officer auhorised by him in this behalf as the case may be. ಎಂದು ಇರುತ್ತದೆ.

ಈ ನಿಯಮಗಳ ಅನುಸಾರ ತಯಾರಕರು, ಮಾರಾಟಗಾರರು ಮತ್ತು ದುರಸ್ತಿದಾರರುಗಳು ಲೆಕ್ಕಗಳನ್ನು ನಿರ್ವಹಿಸಿರುವ ಬಗ್ಗೆ ಪ್ರತೀ ವರ್ಷ ಅವರ ಅನುಜ್ಞಾ ಪತ್ರಗಳನ್ನು ನವೀಕರಣಕ್ಕೆ ಸಲ್ಲಿಸುವ ಸಮಯದಲ್ಲಿ ಲೀಗಲ್ ಮೆಟ್ರಾಲಜಿ ಅಧಿಕಾರಿಗಳಿಗೆ ಪರಿಶೀಲನೆಗೆ ನೀಡುತ್ತಿರುತ್ತಾರೆ. ವರ್ಷದಲ್ಲಿ ಒಂದೇ ಬಾರಿ ಈ ರೀತಿಯ ಲೆಕ್ಕ ಪರಿಶೀಲನೆಗೆ ತಯಾರಕರು, ಮಾರಾಟಗಾರರು ಮತ್ತು ದುರಸ್ತಿದಾರರುಗಳು ಅಧಿಕಾರಿಗಳಿಗೆ ಸಲ್ಲಿಸುವುದರಿಂದ ಪರಿಶೀಲನೆಗೆ ಹೆಚ್ಚು ಸಮಯದ ಅವಕಾಶ ಅಗತ್ಯವಾಗಿರುತ್ತದೆ ಇದರಿಂದಾಗಿ ಅಧಿಕಾರಿಗಳ ದಿನನಿತ್ಯದ ಕೆಲಸ ಕಾರ್ಯಗಳಿಗೆ ತೊಂದರೆ ಉಂಟಾಗುತ್ತಿದೆ. ಮತ್ತು 2020ನೇ ಸಾಲಿನಿಂದ ತಯಾರಕರು, ಮಾರಾಟಗಾರರು ಮತ್ತು ದುರಸ್ತಿದಾರರುಗಳು ಜಿ.ಎಸ್.ಟಿಯನ್ನು ಪಡೆಯುವುದು ಕಡ್ಡಾಯಗೊಳಿಸಿರುವುದರಿಂದ ತಯಾರಕರು, ಮಾರಾಟಗಾರರು ಮತ್ತು ದುರಸ್ತಿದಾರರುಗಳು ತೂಕ,ಅಳತೆ ಮತ್ತು ಅದರ ಸಾಧನಗಳನ್ನು ಮಾರಾಟ ಮಾಡಿದ ಬಗ್ಗೆ, ದುರಸ್ತಿ ಮಾಡಿದ ಬಗ್ಗೆ ಹಾಗೂ ಸರ್ವಿಸ್‌ಗಳನ್ನು ಮಾಡಿ ಸೇವೆಗಳನ್ನು ಒದಗಿಸಿರುವ ಸಂಬಂಧ ತೂಕ,ಅಳತೆ ಮತ್ತು ಸಾಧನಗಳ ಉಪಯೋಗದಾರರಿಂದ ತೆರಿಗೆಗಳನ್ನು ಸಂಗ್ರಹಣೆ ಮಾಡಿ ಅವುಗಳನ್ನು ಸರ್ಕಾರಕ್ಕೆ ಪಾವತಿ ಮಾಡಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಚಾಲ್ತಿಯಲ್ಲಿರುವ ಮೇಲಿನ ನಿಯಮಗಳ ಪ್ರಕಾರ ತಯಾರಕರು, ಮಾರಾಟಗಾರರು ಮತ್ತು ದುರಸ್ತಿದಾರರುಗಳು ಮಾರಾಟ ಮಾಡಿದ, ದುರಸ್ತಿ ಮಾಡಿದ ಲೆಕ್ಕದ ವಿವರಗಳನ್ನು ದಿ ಕರ್ನಾಟಕ ಲೀಗಲ್ ಮಟ್ರಾಲಜಿ (ಅಮಲುಜಾರಿ) ನಿಯಮ 2011ರ ನಿಯಮ 3(12)ರಲ್ಲಿ ಸೂಚಿಸಿರುವಂತೆ ಇನ್ನು ಮುಂದೆ ಪ್ರತಿ 3 ತಿಂಗಳಿಗೆ ಒಮ್ಮೆ ಅಂದರೆ ತ್ರೈಮಾಸಿಕವಾಗಿ ಸಂಬಂಧಪಟ್ಟ ಕ್ಷೇತ್ರವ್ಯಾಪ್ತಿಯ ಕಾನೂನು ಮಾಪನಶಾಸ್ತ್ರ ಸಹಾಯಕ ನಿಯಂತ್ರಕರಲ್ಲಿ ಈ ಪತ್ರದೊಂದಿಗೆ ಲಗತ್ತಿಸಿರುವ ಷೆಡ್ಯೂಲ್ ನಮೂನೆಯಲ್ಲಿರುವಂತೆ ಲೆಕ್ಕದ ವಿವರಗಳನ್ನು ಸಲ್ಲಿಸುವುದು.

1. ಪ್ರತಿ ತ್ರೈಮಾಸಿಕ ವರದಿಗಳನ್ನು ತ್ರೈಮಾಸಿಕ ಅವಧಿ ಮುಗಿದ 20 ದಿನಗಳ ಒಳಗಾಗಿ ಸಂಬಂಧ ಪಟ್ಟ ಸಹಾಯಕ ನಿಯಂತ್ರಕರುಗಳಿಗೆ ಸಲ್ಲಿಸತಕ್ಕದ್ದು. ತ್ರೈಮಾಸಿಕ ಅವಧಿ ಎಂದರೆ
   - ಪ್ರಥಮ ತ್ರೈಮಾಸಿಕ ಅವಧಿಯು ಪ್ರತೀ ವರ್ಷ ಜನವರಿ ಒಂದರಿಂದ ಮಾರ್ಚ್ 31ವರೆಗೆ ಲೆಕ್ಕದ ವಿವರಗಳನ್ನು ಏಪ್ರಿಲ್ 20ನೇ ತಾರೀಖಿನ ಒಳಗಾಗಿ ಸಲ್ಲಿಸುವುದು.
   - ಎರಡನೇ ತ್ರೈಮಾಸಿಕ ಅವಧಿಯು ಪ್ರತೀ ವರ್ಷ ಏಪ್ರಿಲ್ 1 ರಿಂದ ಜೂನ್ 30ರ ವರೆಗೆ ಲೆಕ್ಕದ ವಿವರಗಳನ್ನು ಜುಲೈ 20ನೇ ತಾರೀಖಿನ ಒಳಗಾಗಿ ಸಲ್ಲಿಸುವುದು.
   - ಮೂರನೇ ತ್ರೈಮಾಸಿಕ ಅವಧಿಯು ಪ್ರತೀ ವರ್ಷ ಜುಲೈ 1 ರಿಂದ ಸೆಪ್ಟಂಬರ್ 30ರ ವರೆಗೆ ಲೆಕ್ಕದ ವಿವರಗಳನ್ನು ಅಕ್ಟೋಬರ್ 20ನೇ ತಾರೀಖಿನ ಒಳಗಾಗಿ ಸಲ್ಲಿಸುವುದು.
   - ನಾಲ್ಕನೇ ತ್ರೈಮಾಸಿಕ ಅವಧಿಯು ಪ್ರತೀ ವರ್ಷ ಅಕ್ಟೋಬರ್ 1 ರಿಂದ ಡಿಸೆಂಬರ್ 31ರ ವರೆಗೆ ಲೆಕ್ಕದ ವಿವರಗಳನ್ನು ಮುಂದಿನ ವರ್ಷದ ಜನವರಿ 20ನೇ ತಾರೀಖಿನ ಒಳಗಾಗಿ ಸಲ್ಲಿಸುವುದು.
2. ತಯಾರಿಕ/ಮಾರಾಟ ಮತ್ತು ದುರಸ್ತಿದಾರರುಗಳು ಸಲ್ಲಿಸುವ ಲೆಕ್ಕದ ವಿವರವು ನಗದು/ಕ್ರೆಡಿಟ್ ಬಿಲ್ಲುಗಳನ್ನು ಮಾತ್ರವೇ ಹೊಂದಿರಬೇಕು (cash/credit bills only). ಮತ್ತು ಇವುಗಳ ವಿವರಗಳನ್ನು ರಿಜಿಸ್ಟರ್‌ನಲ್ಲಿ ಬಿಲ್ ಪುಸ್ತಕ ಸಂಖ್ಯೆ, ಬಿಲ್ ಹಾಳೆ ಸಂಖ್ಯೆ ಮತ್ತು ಮೊತ್ತವನ್ನು ಒಳಗೊಂಡಿರುವಂತೆ ನಮೂದಿಸಿರಬೇಕು. (Maintenance service Contract bills ಉಪಯೋಗದಾರರೊಂದಿಗೆ ಮಾಡಿಕೊಳ್ಳುವ ಕರಾರು ಒಪ್ಪಂದವಾಗಿರುತ್ತದೆಯೇ ಹೊರತು ಅವುಗಳು ನಗದು/ಕ್ರೆಡಿಟ್ ಬಿಲ್ಲುಗಳಾಗಿರುವುದಿಲ್ಲ)
3. ಕಾನೂನು ಮಾಪನಶಾಸ್ತ್ರ ಸಹಾಯಕ ನಿಯಂತ್ರಕರುಗಳು ತಯಾರಿಕ/ಮಾರಾಟ ಮತ್ತು ದುರಸ್ತಿದಾರರುಗಳು ಸಲ್ಲಿಸುವ ಲೆಕ್ಕದ ವಿವರಗಳನ್ನು ಪರಿಶೀಲಿಸಿ ಅವುಗಳು ಸರಿ ಇರುವ ಬಗ್ಗೆ ಖಾತರಿ ಪಡಿಸಿಕೊಂಡು ಪ್ರತ್ಯೇಕ ಪ್ರತ್ಯೇಕ ಕಡತಗಳನ್ನು ನಿರ್ವಹಿಸುವುದು.
4. ಕಾನೂನು ಮಾಪನಶಾಸ್ತ್ರ ಸಹಾಯಕ ನಿಯಂತ್ರಕರುಗಳು ತಯಾರಿಕಾ/ಮಾರಾಟ ಮತ್ತು ದುರಸ್ತಿದಾರರುಗಳು ದಿ ಲೀಗಲ್ ಮೆಟ್ರಾಲಜಿ ಕಾಯಿದೆ 2009 ಮತ್ತು ದಿ ಕರ್ನಾಟಕ ಲೀಗಲ್ ಮೆಟ್ರಾಲಜಿ (ಅಮಲುಜಾರಿ)ನಿಯಮ 2011ರ ಉಲ್ಲಂಘನೆಗಳು ಕಂಡು ಬಂದಲ್ಲಿ ಸದರಿ ಕಾಯಿದೆ ಮತ್ತು ನಿಯಮಗಳಲ್ಲಿ ನೀಡಲಾಗಿರುವ ಅಧಿಕಾರಗಳನ್ನು ಚಲಾಯಿಸಬಹುದಾಗಿರುತ್ತದೆ.

**ನಿಯಂತ್ರಕರು**
**ಕಾನೂನು ಮಾಪನಶಾಸ್ತ್ರ ಇಲಾಖೆ**

ಗೆ,

1)ರಾಜ್ಯದ ಎಲ್ಲಾ ಕಾನೂನು ಮಾಪನಶಾಸ್ತ್ರ ಉಪ ನಿಯಂತ್ರಕರು, ಸಹಾಯಕ ನಿಯಂತ್ರಕರು ಮತ್ತು ನಿರೀಕ್ಷಕರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸುತ್ತಾ ತಮ್ಮ ವ್ಯಾಪ್ತಿಗೆ ಒಳಪಡುವ ತಯಾರಕರು, ಮಾರಾಟಗಾರರು ಮತ್ತು ದುರಸ್ತಿದಾರರುಗಳಿಗೆ ಸದರಿ ಸುತ್ತೋಲೆಯನ್ನು ನೀಡಿ ಸ್ವೀಕೃತಿಯನ್ನು ಪಡೆಯುವುದು.

2)ರಾಜ್ಯದ ಎಲ್ಲಾ ತಯಾರಕರು, ಮಾರಾಟಗಾರರು ಮತ್ತು ದುರಸ್ತಿದಾರರುಗಳಿಗೆ.

3) ಇ. ಮಾಹಿತಿ website ನಲ್ಲಿ ಪ್ರಕಟಣೆಗಾಗಿ ಮಾಹಿತಿ

**SCHEDULE-VII**

**(See Rule 3(12))**

Register to be maintained by the Manufacturers of weights & measures

1. Name and Address of the Manufacturer :
2. Description of the weight or measure :
3. Manufacturer License No. :
4. Number of manufacturing license :
5. Date on which the license was issued :
6. Period of validity of the license :
7. Category of weight or measure (Category A or B ) :
8. Details of the 1st /$2^{nd}$ /$3^{rd}$ /$4^{th}$ Quarter i.e. From date________ to ________
9. Particulars if any :

| Sl No. | Period | Unsold stock from previous quarter | Quantity manufactured during the quarter | Total 3+4 | Sold within the state | | Sold outside the state | | Dispatch voucher no. and date | Total Sold 6+9 | Balance (5-11) | Remarks |
|---|---|---|---|---|---|---|---|---|---|---|---|---|
| | | | | | No. of item sold | Dispatch voucher No. & date | Name of the State | No.of items sold | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | | | | | | | | | | | | |

ಠಿಙಿ/—

**SCHEDULE-VII**

**(See Rule 3(12)**

Register to be maintained by the Dealer in weights & measures

1. Name and Address of the Dealer :
2. Description of the weight or measure :
3. Dealer License No. :
4. Number of Dealering license :
5. Date on which the license was issued :
6. Period of validity of the license :
7. Category of weight or measure (Category A or B or C) :
8. Details of the 1st /2$^{nd}$ /3$^{rd}$ /4$^{th}$ Quarter i.e. From date_________ to ________
9. Particulars if any :

| Sl No. | Period | Unsold stock from previous quarter | Brought from within the state during the period | Brought from outside the state during the period | Total 3+4+5 | Sold within the state | | Sold outside the state | | | Total sold (7+9) | Balance (6-2) | Remarks |
|---|---|---|---|---|---|---|---|---|---|---|---|---|---|
| | | | | | | No. of item sold | Dispatch voucher No. & date | No. of items sold | Dispatch voucher No. & date | Name of the State | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| | | | | | | | | | | | | | |

## SCHEDULE-VII
**(See Rule 3(12))**

Register to be maintained by the Repairer in respect of weights & measures

1. Name and Address of the Repairer :
2. Description of the weight or measure :
3. Repairing License No. :
4. Number of Repairing license :
5. Date on which the license was issued :
6. Period of validity of the license :
7. Category of weight or measure (Category A or B ) :
8. Details of the 1st /2$^{nd}$ /3$^{rd}$ /4$^{th}$ Quarter i.e. From date_________ to ________
9. Particulars if any :

| Sl No. | Period | Name of the user from whom received | Items and their Nos. booked for repair | Receipt No. and date of issue to the user | Amount of repairing charges | Date of return to the user | Remarks |
|---|---|---|---|---|---|---|---|
| 1 | 2 | 3 | 4 | 5 | 11 | 12 | 13 |
| | | | | | | | |

ರೂ/-